ಶ್ರೀ ಜೆ.ಹೆಚ್. ಪಟೇಲ್.—ಯಾವುದೇ ಸಲಹೆಯಾಗಲೀ, ಸೂಚನೆಯಾಗಲೀ, ಕೇಂದ್ರ ಸರ ಕಾರದಿಂದ ಈ ಬಗ್ಗೆ ಬಂದಿಲ್ಲ. ಬಂದರೆ ಸರಿಯಾದ ಉತ್ತರ ಕೊಡುತ್ತೇವೆ.

ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಕಿಸಾನ್ ನರ್ಸರಿಗಳನ್ನು ಬೆಳಸುವುದು

೬೩(೩೦೨) ಜ್ಞಾನದೇವ ದೊಡ್ಡಮೇಟಿ(ರೋಣ).—ಮಾನ್ಯ ಅರಣ್ಯ ಗಣಿ, ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸಾಮಾಜಿಕ ಅರಣ್ಯ ಯೋಜನೆಯಲ್ಲಿ ಕಿಸಾನ್ ನರ್ಸರಿಗಳನ್ನು ಬೆಳಸಲು ರೈತರಿಗೆ ನೀಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಧಾರವಾಡ ಜಿಲ್ಲೆಯಲ್ಲಿ ಎಷ್ಟು ರೈತರಿಗೆ ಕಿಸಾನ್ ನರ್ಸರಿ ಬೆಳಸಲು ಮಂಜೂರಾತಿ ನೀಡಲಾಗಿದೆ(ತಾಲ್ಲೂಕು ವಾರು ಮಾಹಿತಿ ಒದಗಿಸುವುದೇ) ?

ಶ್ರೀ ಜಿ.ಎಸ್. ದೇಶ್‌ಮುಖ್(ಅರಣ್ಯ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಹೌದು.

ಆ) ಧಾರವಾಡ ಜಿಲ್ಲೆಯಲ್ಲಿ ೧೨೦ ರೈತರುಗಳಿಗೆ ಕಿಸಾನ್ ನರ್ಸರಿ ಬೆಳಸಲು ಮಂಜೂರಾತಿ ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿಯು ಈ ಕೆಳಗಿನಂತಿದೆ,

ಕಲ್‌ಘಟಗಿ	ತಾಲ್ಲೂಕು	೧೦
ಹುಬ್ಬಳ್ಳಿ	,,	೧
ಧಾರವಾಡ	,,	೩೩
ಹಾನಗಲ್	,,	೩
ಸಿಂಗಾಮಿ	,,	೬
ಸವಣೂರು	,,	೪
ಕುಂದಗೋಳ	,,	೩
ಬ್ಯಾಡಗಿ	,,	೧೩
ಗದಗ್	,,	—
ಹಾವೇರಿ	,,	೧೫
ಹಿರೇಕೆರೂರು	,,	—
ಮುಂದರ್ಗಿ	,,	—
ನರಗುಂದ	,,	—
ನವಲಗುಂದ	,,	—
ರಾಣೆಬೆನ್ನೂರು	,,	೧೦
ರೋಣ	,,	೧೨
ಶಿರಹಟ್ಟಿ	,,	೧೦
	ಒಟ್ಟು ಸಂಖ್ಯೆ.	೧೨೦

ಇದಲ್ಲದೆ ರಾಣೆಬೆನ್ನೂರು ತಾಲ್ಲೂಕಿನಲ್ಲಿ ಮದ್ದೆರಿಯಾ ಸ್ವಯಂಸೇವಾ ಸಂಘದ ಮುಖಾಂತರ ೨೨೪ ರೈತರುಗಳಿಗೆ ೬ ಲಕ್ಷ ಸಸಿಗಳನ್ನು ಬೆಳೆಸಲು ಸರ್ಕಾರ ಸೌಲಭ್ಯಗಳನ್ನು ಒದಗಿಸಿರುತ್ತದೆ.

ಶ್ರೀ ಜ್ಞಾನದೇವ ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಕೆಲವು ತಾಲ್ಲೂಕುಗಳಲ್ಲಿ ಕಿಸಾನ್ ನರ್ಸರಿಯನ್ನೇ ಬೆಳೆಸಿಲ್ಲ, ಅಲ್ಲಿ ಬೆಳಸದಿರುವುದಕ್ಕೆ ಕಾರಣ ಏನು ? ರೈತರು ಸಿಗಲಿಲ್ಲವೋ ಅಥವಾ ಬೇರೆ ಕಾರಣಕ್ಕಾಗಿ ಈ ತಾಲ್ಲೂಕುಗಳು ಈ ಸೌಲಭ್ಯದಿಂದ ವಂಚಿತವಾಗಿವೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಈ ಯೋಜನೆಯಲ್ಲಿ ಐದು ವರ್ಷಗಳ ಕಾಲದಲ್ಲಿ ೬೦ ಕೋಟಿ ಸಸಿಗಳನ್ನು ಬೆಳೆಸಿ ರೈತರಿಗೆ ಹಂಚಲು ಯೋಜನೆ ಹಾಕಿಕೊಳ್ಳಲಾಗಿದೆ. ಅದರ ಪ್ರಕಾರ ೧೯೮೪–೮೫ ರಲ್ಲಿ ೧.೨೫ ಕೋಟಿ ಸಸಿಗಳನ್ನು ಬೆಳೆಸಲಾಗಿದೆ. ೧೯೮೫–೮೬ ರಲ್ಲಿ ೪.೨೫ ಕೋಟಿ ಸಸಿಗಳನ್ನು ಕಿಸಾನ್ ನರ್ಸರಿಯಲ್ಲಿ ಬೆಳೆಸುತ್ತಿದ್ದೇವೆ. ಯಾರಾದರೂ ರೈತರು ಮುಂದೆ ಬಂದರೆ ಅವರಿಗೆ ೨೬ ಲಕ್ಷ ಸಸಿಗಳನ್ನು ಬೆಳೆಸುವುದಕ್ಕೆ ಅನುಮತಿ ಕೊಡುತ್ತೇವೆ. ಹಾಗೂ ಅವರು ಬೆಳೆಸಿದ ಸಸಿಗಳನ್ನು ಒಂದು ಸಸಿಗೆ ೩೫ ರಿಂದ ೪೦ ಪೈಸೆಯಂತೆ ನಮ್ಮ ಇಲಾಖೆಯಿಂದ ಪರ್ಚೇಸ್ ಮಾಡುತ್ತೇವೆ.

- ಶ್ರೀ ಜ್ಞಾನದೇವ ದೊಡ್ಡಮೇಟಿ.—ರೈತರು ಬೆಳೆಸಿದ ಸಸಿಗಳನ್ನು ಅರಣ್ಯ ಇಲಾಖೆಯವರು ಕೊಂಡುಕೊಳ್ಳುತ್ತಾರೆಯೇ ? ಇದರಿಂದ ರೈತರಿಗೆ ಏನು ಲಾಭ ಇದೆ. ?

ಶ್ರೀ ಜೆ. ಎಸ್. ದೇಶ್‌ಮುಖ್.—ರೈತರಿಗೆ ಬೀಜಗಳನ್ನು ಕಿಸಾನ್ ನರ್ಸರಿಯಲ್ಲಿ ಬೆಳೆಸಲು ಪುಕ್ಕಟೆಯಾಗಿ ಕೊಡುತ್ತೇವೆ. ನಂತರ ಅವರು ಬೆಳೆಸಿದ ಸಸಿಗಳನ್ನು ೩೫–೪೦ ಪೈಸೆ ಕೊಟ್ಟು ಖರೀದಿ ಮಾಡುತ್ತೇವೆ. ಪುನಃ ಇದನ್ನು ಬೆಳೆಸಲು ರೈತರಿಗೆ ಪುಕ್ಕಟೆಯಾಗಿ ಹಂಚುತ್ತೇವೆ.

ಅಧ್ಯಕ್ಷರು—ಮಾನ್ಯ ಕೆ. ಕುಶಾಲ ಇವರ ಪ್ರಶ್ನೆ ಸಂಖ್ಯೆ ೬೪(೪೫೩)ನ್ನು (೧) ಗ್ರೂಪ್‌ಗೆ ವರ್ಗಾಯಿಸಲಾಗಿದೆ.

ಚುಕ್ಕೆ ಪ್ರಶ್ನೆ ೬೫(೪೯೬) ಶ್ರೀ ವಸಂತ್ ಬಂಗೇರಾ(ಸದಸ್ಯರು ಗೈರು ಹಾಜರಿ)

ಶ್ರೀಮತಿ ಮುಮ್ತಾಜುನ್ನಿಸಾ ಇವರ ಪ್ರಶ್ನೆ ಸಂಖ್ಯೆ ೬೬(೮೦)ನ್ನು ಮುಂದೂಡಲಾಗಿದೆ.
ಮುಂದಿನ ಪ್ರಶ್ನೆ ಶ್ರೀ ಕಾನಡೆಯವರು ಕೇಳಬಹುದು.

ಉಪ್ಪಾಗೆ ಸಿಪ್ಪೆ ಹಣ್ಣಿನ ಹರಾಜು

೬೭(೮೦) ಶ್ರೀ ಗೋಪಾಲ ಮುಕುಂದ ಕಾನಡೆ(ಸಿರ್ಸಿ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೫–೮೪ ರಿಂದ ಉಪ್ಪಾಗೆ ಸಿಪ್ಪೆ ಹಣ್ಣಿನ ಬಹಿರಂಗ ಹರಾಜು ಕರೆದಿದ್ದು ೧೯೮೫–೮೬ ಹಾಗೂ ೧೯೮೬–೮೭ರಲ್ಲಿ ಈ ಬಗ್ಗೆ ಬಹಿರಂಗ ಹರಾಜನ್ನು ಸಿರ್ಸಿ ಸಿದ್ದಾಪುರ ವಲಯದಲ್ಲಿ ಕರೆಯದೇ ಇರಲು ಕಾರಣವೇನು ?

ಆ) ಸರ್ಕಾರದಿಂದ ಬಹಿರಂಗ ಹರಾಜು ಕರೆಯಲು ಆದೇಶವಿದ್ದರೂ, ಸಿರ್ಸಿಯ ಅರಣ್ಯ ಸಂರಕ್ಷಣಾಧಿಕಾರಿಗಳು ಸರ್ಕಾರಿ ಆಜ್ಞೆಯನ್ನು ಉಲ್ಲಂಘಿಸುವುದು ನಿಜವೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಜೆ.ಎಸ್. ದೇಶ್‌ಮುಖ್(ಅರಣ್ಯ ಮಂತ್ರಿಗಳು).—

ಅ) ಬಹಿರಂಗ ಹರಾಜಿನಲ್ಲಿ ಗುತ್ತಿಗೆ ಪಡೆದ ಹಿಂದಿನ ಗುತ್ತಿಗೆದಾರರುಗಳು ಉಪ್ಪಾಗೆ ಮರಗಳನ್ನು ವಿವೇಚನಾ ರಹಿತವಾಗಿ ಕಡಿದು ಮರಗಳಿಗೆ ಜಖಂ ಮಾಡಿದ್ದು ಮತ್ತು ಸದರಿ ಗುತ್ತಿಗೆದಾರರ ಮೇಲೆ ಅಪಾದನೆಗಳು ಬಂದಿರುವುದರಿಂದ ಬಹಿರಂಗ ಹರಾಜನ್ನು ಮಾಡಲಿಲ್ಲ.

ಆ) ೧೯೮೫–೮೬ ಮತ್ತು ೧೯೮೬–೮೭ರ ಸಾಲಿನ ಗುತ್ತಿಗೆಯನ್ನು ರೂ. ಒಂದು ಲಕ್ಷಕ್ಕೆ ತಗ್ಗು ಬೆಲೆಯಲ್ಲಿ ಕೃಷಿ ಮತ್ತು ಕ್ಷೀರ ಉತ್ಪಾದಕರ ವಿಪಥ್ವೋದ್ದೇಶದ ಸಹಕಾರಿ ಸಂಘ(ನಿಯಮಿತ) ಬಕ್ಕಳ್ ಅವರಿಗೆ ನೀಡಿರುವುದರಿಂದ ಉಲ್ಲಂಘನೆಯ ಪ್ರಶ್ನೆಯಿಲ್ಲ.

ಇ) ಮೇಲ್ಕಂಡ(ಆ)ಕ್ಕೆ ನೀಡಿದ ಉತ್ತರದಿಂದ ಈ ಸಮಸ್ಯೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಉಪ್ಪಾಗೆ ಸಿಪ್ಪೆ ಹಣ್ಣು ಎಂದರೆ ನನ್ನ ಕಡೆ ಬೆಳೆಯುತ್ತದೆ. ಇದನ್ನು ೧೯೮೫–೮೬ನೇ ಇಸವಿಯಲ್ಲಿ ಒಂದು ಲಕ್ಷ ಚಿಲ್ಲರೆ ರೂಪಾಯಿಗಳಿಗೆ ಹರಾಜು ಮಾಡಿದ್ದರು. ಹರಾಜು ಮಾರಾಟದಲ್ಲಿ ತೆಗೆದುಕೊಂಡವರು ಮರವನ್ನು ಕಡಿದು ಹಾಳು ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ರೀತಿ ಆದರೆ ಹರಾಜು ಬಂದ್ ಮಾಡಬೇಕು. ಯಾರಾದರೂ ಒಬ್ಬರ ಹೆಸರಿಗೆ ಹರಾಜು ಕೊಡಿರಿ ಎಂದು ನಾನು ಕೇಳುತ್ತಿಲ್ಲ. ನಮ್ಮ ಸರಕಾರ ಅರಣ್ಯ ಇಲಾಖೆ ಅಧಿಕಾರಿಗಳನ್ನು ರಕ್ಷಣೆ ಮಾಡುತ್ತಿದೆ. ಕೋಟ್ಯಾಂತರ ರೂಪಾಯಿಗಳ ಲಾಸ್ ಮಾಡಿದವರನ್ನು ಇವತ್ತು ರಕ್ಷಣೆ ಮಾಡುತ್ತಿದ್ದಾರೆ. ಈ ಹಣ್ಣಿನ ಹರಾಜಿನಿಂದ ಸರಕಾರಕ್ಕೆ ಎರಡೂವರೆ ಮೂರು ಲಕ್ಷ